**ಸಾಕ್ಷಿಯನ್ನು ದಿಃ 15.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಈ ದಾವೆಯನ್ನು ನಾವು ಮತ್ತು ನಮ್ಮ ತಾಯಿ ಹಾಗೂ ತಮ್ಮ - ತಂಗಿ ಸೇರಿ ಲಕ್ಷ್ಮಮ್ಮ ಮತ್ತು ಅವರ ಮಕ್ಕಳ ಮೇಲೆ ಹಾಕಿರುತ್ತೇನೆ. ನಮಗೆ ಜಮೀನು ಬರಬೇಕು ಎಂದು ದಾವೆ ಹಾಕಿರುತ್ತೇವೆ.

2. ನನ್ನ ತಾತ ಮರಿಯಪ್ಪ ಹಾಗೂ ಅಜ್ಜಿ ಚಿನ್ನಮುತ್ತಮ್ಮನವರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ 8 ಜನ ಗಂಡು ಮಕ್ಕಳು ಇರುತ್ತಾರೆ. ನನ್ನ ತಾತನಿಗೆ ಚಿನ್ನಮುತ್ತಮ್ಮ, ಕಾಳಮ್ಮ ಹಾಗೂ ಮರಿಯಮ್ಮ ಎಂಬ 3 ಜನ ಪತ್ನಿಯರು.

3. ಕಾಳಮ್ಮ ನವರಿಗೆ ಸ್ವಾಮಿಗೌಡ, ಶ್ರೀನಿವಾಸ, ಮಂಜುನಾಥ, ಗಣೇಶ ಎಂಬ 4 ಜನ ಮಕ್ಕಳು ಇದ್ದಾರೆ. ಅವರ ಪೈಕಿ ಗಣೇಶ ರವರು ಮೃತಪಟ್ಟಿದ್ದಾರೆ.

4. ಮರಿಯಮ್ಮನವರಿಗೆ ಕರಿಮಾದಿ ಹಾಗೂ ಬಿಳಿಮಾದಿ ಎಂಬ ಇಬ್ಬರು ಹೆಣ್ಣು ಮಕ್ಕಳು. ಸದರಿ ಮರಿಯಮ್ಮ ಹಾಗೂ ಅವರ ಹೆಣ್ಣುಮಕ್ಕಳು ಜೀವಂತವಾಗಿದ್ದಾರೆ.

5. ಮರಿಯಪ್ಪನವರಿಗೆ ಒಟ್ಟು ಎಷ್ಟು ಜಮೀನು ಇತ್ತು ಎಂದು ಗೊತ್ತಿಲ್ಲ.

6. ನನ್ನ ತಾತ ಬದುಕಿರುವಾಗ ಮೂರು ಜನ ಪತ್ನಿಯರ ನಡುವೆ ವಿಭಾಗಪತ್ರ ಆಗಿತ್ತಾ ಎಂದರೆ, ಅವರು ಮುದ್ದನಹಳ್ಳಿಗೆಯಲ್ಲಿ ಇದ್ದರು, ನಾವು ಅಲ್ಲಿಗೆ ಹೋಗಿಲ್ಲ ಹಾಗೂ ಅವರು ಇಲ್ಲಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಯಾವುದೇ ದಾಖಲೆ ಆಗಿಲ್ಲ.

7. ಮರಿಯಪ್ಪನವರ ಜೊತೆ ದೊಡ್ಡಪ್ಪಾಜಿಗೌಡ, ಅನಂತರಾಮು, ಗಿಡ್ಡಪ್ಪ ಹಾಗೂ ಲಕ್ಷ್ಮಮ್ಮ ಹಾಗೂ ಕಾಳಮ್ಮ ಎಂಬವರು ಒಡಹುಟ್ಟಿದವರು. ಸದರಿಯವರ ನಡುವೆ 1965 ರಲ್ಲಿ ವಿಭಾಗ ಆಗಿದೆ ಎಂದರೆ ಸರಿ.

8. ಸದರಿ ವಿಭಾಗ ಪತ್ರದ ಪ್ರಕಾರ ದಾವಾ ಸ್ವತ್ತು ಮರಿಯಪ್ಪನವರಿಗೆ ಬಂದಿರುತ್ತದೆ. ನನ್ನ ತಾತ ಯಾವಾಗ ಮೃತರಾದರು ಎಂದು ನನಗೆ ನೆನಪಿಲ್ಲ.

9. ಎಸ್.ಎಂ.ಮರಿಯಪ್ಪ ಹಾಗೂ ಚಿನ್ನಮುತ್ತಮ್ಮ ನವರ ಮಕ್ಕಳು ಬಸವರಾಜು, ಪ್ರೇಮಕುಮಾರ, ಶಿವಣ್ಣ, ಮಹಾದೇವ, ಅಶೋಕ, ಪುರುಷರೋತ್ತಮ, ಭವಾನಿಶಂಕರ, ಬಾಲಕೃಷ್ಣ, ಲೀಲಾವತಿ ಹಾಗೂ ಮಂಜುಳ.

10. ಸದರಿಯವರ ನಡುವೆ ಆದ ಪಂಚಾಯತಿ ಪಾಲುಪಾರಿಕತ್ತಿನಲ್ಲಿ ಲೀಲಾವತಿ ಹಾಗೂ ಮಂಜುಳ ರವರು ಪಕ್ಷಗಾರರಲ್ಲ ಎಂದರೆ ಸರಿ. ಸದರಿಯವರು ಈಗಲೂ ಬದುಕಿದ್ದಾರೆ ಎಂದರೆ ಸರಿ.

11. ನನ್ನ ತಂದೆ ಪೆಬ್ರುವರಿ 2005 ರಲ್ಲಿ ಮೃತರಾಗಿರುತ್ತಾರೆ.

12. ಪಂಚಾಯತಿ ಪಾಲುಪಾರಿಕತ್ತು ಆದ ಸಮಯದಲ್ಲಿ 1 ನೇ ಪ್ರತಿವಾದಿ ಬದುಕಿದ್ದರು ಎಂದರೆ ಸರಿ. ಆ ಸಮಯದಲ್ಲಿ ದಾವಾ ಸ್ವತ್ತು ಲಕ್ಷ್ಮಮ್ಮ ನವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

13. ಪಂಚಾಯತಿ ಪಾಲುಪಾರಿಕತ್ತು ಆದ ಸಮಯದಲ್ಲಿ ಲಕ್ಷ್ಮಮ್ಮ ನವರು ಪಕ್ಷಗಾರರು ಆಗಿರಲಿಲ್ಲ ಎಂದರೆ ಸರಿ. ಪಕ್ಷಗಾರರಾಗಿ ಮಾಡಲು ತೊಂದರೆ ಇತ್ತಾ ಎಂದರೆ, ಪ್ರೇಮ್ ಕುಮಾರ ರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ.

14. ಎಸ್.ಎಂ.ಮರಿಯಪ್ಪ ನವರ ಹೆಸರು 1963 ರಿಂದ ಎಲ್ಲಿಯವರೆಗೆ ಕಂದಾಯ ದಾಖಲಾತಿಗಳಲ್ಲಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

15. ನಾನು ಪಿ.ಯು.ಸಿ ವರೆಗೆ ಓದಿದ್ದೇನೆ.

16. ನಿಪಿ - 7 ರ ಕೈಬರಹದ ಪಹಣಿಯಲ್ಲಿ 1990-91 ರಲ್ಲಿ ಲಕ್ಷ್ಮಮ್ಮ ಬಿನ್ ಎಂ.ಎಸ್.ಹಬ್ಬಿಗೌಡ ರವರ ಹೆಸರಿಗೆ ಇದೆ ಎಂದರೆ ಸರಿ. 1990-91 ರಿಂದ ಅವರು ಅವರು ಮಕ್ಕಳಿಗೆ ವಿಭಾಗ ಪತ್ರ ಆಗುವವರೆಗೆ ಅವರ ಹೆಸರಿನಲ್ಲಿ ಇತ್ತು ಎಂದರೆ, ಸರಿ.

17. ಲಕ್ಷ್ಮಮ್ಮ ರವರ ತಂದೆ ಹೆಸರು ಹಬ್ಬಿಗೌಡ ಎಂದರೆ ಸರಿ. ಹಬ್ಬಿಗೌಡ ರವರು ಮೂಲತಃ ಮಂಚನಳ್ಳಿಯವರು. ಅವರಿಗೆ ಹಾಗೂ ನಮ್ಮ ಕುಟುಂಬಕ್ಕೆ ಹಳೆ ಸಂಬಂಧ ಇರಲಿಲ್ಲ.

18. ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ಆದ ವಿಭಾಗ ಪತ್ರದ ಪ್ರಕಾರ ಅವರವರ ಹೆಸರಿಗೆ ಖಾತೆ ಆಗಿವೆ.

19. ದಾವಾ ಸ್ವತ್ತು ಕೈ ಬಿಟ್ಟು ಹೋಗಿರುವ ವಿಚಾರ ನನ್ನ ತಂದೆಗೆ ಗೊತ್ತಿತ್ತು. ನನ್ನ ತಂದೆ ಬದುಕಿರುವಾಗ ಆ ಬಗ್ಗೆ ಯಾವುದೇ ಅರ್ಜಿ ನೀಡಿಲ್ಲ.

20. ನನ್ನ ತಂದೆ ಬದುಕಿರುವಾಗ ನ್ಯಾಯ ಪಂಚಾಯತಿ ಸೇರಿಸಿದ್ದರು. ಆ ಸಮಯದಲ್ಲಿ ಸ್ವಾಮಿಗೌಡ, ಗಿಡ್ಡಪ್ಪ, ಪುಟ್ಟೇಗೌಡ, ತಮ್ಮೇಗೌಡರು ಸಹ ಇದ್ದರು.

21. ಸದರಿ ನ್ಯಾಯಾಪಂಚಾಯತಿಯಲ್ಲಿ ಪ್ರೇಮ್ ಕುಮಾರ್ ರವರು ಟ್ರಾಕ್ಟರ್ ತೆಗೆದುಕೊಂಡಿದ್ದೇನೆ, ನಂತರ ಬರೆದುಕೊಡುತ್ತೇನೆ ಎಂದು ಹೇಳಿದ್ದರು. ಆ ಬಗ್ಗೆ ಯಾವುದೇ ಬರವಣಿಗೆ ಆಗಿಲ್ಲ.

22. ನಾನು, ನನ್ನ ತಮ್ಮ, ತಂಗಿ ಹಾಗೂ ನನ್ನ ತಾಯಿ ವಿಭಾಗ ಪತ್ರದ ಪ್ರಕಾರ ಖಾತೆ ಮಾಡಿಕೊಡುವಂತೆ ಎ.ಸಿ ರವರ ಮುಂದೆ ಅರ್ಜಿ ಹಾಕಿದ್ದೇವೆ ಎಂದರೆ ಸರಿ. ಸದರಿ ಪ್ರಕರಣಲ್ಲಿ ಏನು ಆದೇಶವಾಗಿದೆ ಎಂದರೆ, ನಮ್ಮ ಪರವಾಗಿ ಆಗಿದೆ. ಪುನಃ ನಮ್ಮ ದೊಡ್ಡಪ್ಪ ನಮ್ಮ ಮನೆಗೆ ಬಂದಾಗ ನಂತರ ಬರೆದುಕೊಡುತ್ತೇನೆ ಎಂದು ಹೇಳಿದ್ದರು. ಅದು ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ನಮೂದಿಸಿದ್ದೇವೆ.

23. ಯಾವ ದಿನಾಂಕದಂದು ಸದರಿ ಆದೇಶವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ, ಆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ.

24. 3 ಮತ್ತು 4 ನೇ ಪ್ರತಿವಾದಿಗಳ ಮಕ್ಕಳು, ರಾಘವೇಂದ್ರ ರವರ ವಿರುದ್ಧ ಎ.ಸಿ ನ್ಯಾಯಾಲಯದಲ್ಲಿ ದಾವೆ ಹಾಕಿರಲಿಲ್ಲ.

25. ನಮಗೆ ಬರಬೇಕಾದ ಜಮೀನು ಕೊಡಿಸುವಂತೆ ಈ ದಾವೆಯನ್ನು ಹಾಕಿದ್ದೇವೆ.

26. ವಾದಪತ್ರ ಯಾವ ವಕೀಲರ ಕಛೇರಿಯಲ್ಲಿ ತಯಾರಿಸಲಾಯಿತು ಎಂದು ಗೊತ್ತಿಲ್ಲ. ವಾದಪತ್ರಕ್ಕೆ ನಾನು ನಮ್ಮ ತಮ್ಮನ ಕಛೇರಿಯಲ್ಲಿ ಸಹಿ ಹಾಕಿರುತ್ತೇನೆ.

27. ಈ ದಾವೆ ಸಲ್ಲಿಸುವ ಸಮಯದಲ್ಲಿ ಸಿ.ಎಸ್.ಮಂಜುನಾಥ ಸ್ವಾಮಿ ವಕೀಲರಿಗೆ ಸಂಪೂರ್ಣ ಮಾಹಿತಿ ಇರಲಿಲ್ಲ ಎಂದರೆ, ನನಗೆ ಗೊತ್ತಿಲ್ಲ.

28. ಈ ದಾವೆ ಹಾಕುವಾಗ ನಿಮ್ಮ ತಮ್ಮ ಗಿರೀಶ ರವರು ಅವರ ಕಛೇರಿಯನ್ನು ಪ್ರಾರಂಭಿಸಿದ್ದರು ಎಂದರೆ ಸರಿ.

29. 2015-16 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಆದ ಪೋಡು ರದ್ದುಪಡಿಸುವಂತೆ ಕೋರಿ ಡಿ.ಸಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ.

30. ಮೇಲ್ಮನವಿ ಸಂ.174/2014-15 ರಂತೆ ಲಕ್ಷ್ಮಮ್ಮ ನವರು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕು ಮೈಸೂರು ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ಏನಾಗಿದೆ ಎಂದರೆ, ನಮ್ಮ ಪರವಾಗಿ ಆಗಿದೆ. ಸದರಿ ವಿಚಾರವನ್ನು ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

31. ಪ್ರೇಮ್ ಕುಮಾರ್ ಹಾಗೂ ಲಕ್ಷ್ಮಮ್ಮ ರವರು ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಿಮ್ಮ ವಿರುದ್ಧ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವಾಗಿದೆ ಎಂದರೆ ಸರಿಯಲ್ಲ. ಸದರಿ ವಿಚವಾರವಾಗಿ ನಿಮ್ಮ ಹಾಗೂ ಅವರ ನಡುವೆ ಕ್ರಿಮಿನಲ್ ಪ್ರಕರಗಳು ಇವೆ ಎಂದರೆ ಸರಿ, ಅವು ಈಗಾಗಲೇ ಹುಣಸೂರು ನ್ಯಾಯಾಲಯದಲ್ಲಿ ಇತ್ಯರ್ಥವಾಗಿವೆ.

32. ಪ್ರೇಮ್ ಕುಮಾರ್ ರವರ ಹೆಸರಿಗೆ ಸ.ನಂ.48 ರಲ್ಲಿ 2 ಎಕರೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ಸರಿ, ನಮ್ಮ ತಂದೆ ಹಾಗೂ ಅವರು ಸೇರಿ 4 ಎಕರೆ ಖರೀದಿ ಮಾಡಿದ್ದಾರೆ ಎಂದು ನಮ್ಮ ತಂದೆ ತಿಳಿಸಿರುತ್ತಾರೆ, ನಂತರ ಅವರ ಅಣ್ಣನ ಹೆಸರಿಗೆ ಇರಲಿ ಎಂದು ಅವರ ಹೆಸರಿಗೆ 2 ಎಕರೆ ಹಾಗೂ 2 ಎಕರೆ ನನ್ನ ತಂದೆ ಹೆಸರಿಗೆ ಮಾಡಿಕೊಟ್ಟಿರುತ್ತಾರೆ. ಯಾರಿಂದ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆಬಗ್ಗೆ ಯಾವ ಪತ್ರ ಬರೆದುಕೊಟಿ-ದ್ದರೆ ಎಂದು ನನಗೆ ಗೊತ್ತಿಲ್ಲ.

33. ಈಗ ಸದರಿ ಸ್ವತ್ತು 2 ಎಕರೆ ಪ್ರೇಮ್ ಕುಮಾರ್ ರವರ ಹೆಸರಿಗೆ ಹಾಗೂ 2 ಎಕರೆ ನನ್ನ ತಾಯಿ ಹೆಸರಿಗೆ ಪೌತಿ ಖಾತೆಯಾಗಿದೆ.

34. ದಾವಾ ಸ್ವತ್ತುಗಳು ಮೂಲತಃ 1 ನೇ ಪ್ರತಿವಾದಿಗೆ ಅವರ ಮಾವ ಮರಿಯಪ್ಪ ನವರಿಂದ ಬಂದ ಸ್ವತ್ತಾಗಿದ್ದು, ವಿಭಾಗದ ಪ್ರಕಾರ ಬಂದಿಲ್ಲ ಎಂದರೆ ಸರಿಯಲ್ಲ. ಆಗಿನಿಂದ ವಿಭಾಗಪತ್ರ ಆಗುವವರೆಗೆ ಲಕ್ಷ್ಮಮ್ಮ ನವರ ಹೆಸರಿಗೆ ಇದ್ದವು ಎಂದರೆ ಸರಿಯಲ್ಲ.

35. ನೀವು ಎಂದಿಗೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

36. ವಿಭಾಗ ಪತ್ರ ನೊಂದಣಿಯಾಗಿರಲಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ